ಇ) ಕೇಂದ್ರದಿಂದ ಇದುವರೆಗೆ ಈ ಬಾಬ್ತಿನಿಂದ ಎಷ್ಟು ಅನುದಾನ ದೊರಕಿದೆ? ಸಾಲದ ರೂಪದಲ್ಲಿ ಎಷ್ಟು ಹಣ ದೊರಕಿದೆ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು):

ಅ) ರೂ.132.63 ಕೋಟಿಗಳು.

ಆ) ಈ ಸೌಲಭ್ಯ ದೊರೆತಿರುವ ರೈತರ ಹಾಗೂ ಕುಶಲಕರ್ಮಿಗಳ ಜಿಲ್ಲಾವಾರು ವಿವರಗಳು ರೀತಿ ಇರುತ್ತವೆ.

ಕೋಟಿ ರೂ.ಗಳಲ್ಲಿ

ಕ್ರ. ಸಂ.	ಜಿಲ್ಲೆಯ ಹೆಸರು	ರೈತರು	ಕುಶಲಕರ್ಮಿಗಳು
1.	ಬೆಂಗಳೂರು	25756	490
2.	ಕೋಲಾರ	23214	49
3.	ಚಿತ್ರದುರ್ಗ	20785	129
4.	ಶಿವಮೊಗ್ಗ	21201	221
5.	ತುಮಕೂರು	22206	476
6.	ಮಂಡ್ಯ	23309	775
7.	ಮೈಸೂರು	38524	1084
8.	ಹಾಸನ	14094	261
9.	ದಕ್ಷಿಣ ಕನ್ನಡ	9302	1103
10.	ಕೊಡಗು	5958	—
11	ಚಿಕ್ಕಮಗಳೂರು	9673	80
12.	ಬೆಳಗಾಂ	38038	940
13.	ಬಿಜಾಪುರ	36375	375
14.	ಧಾರವಾಡ	77340	59
15.	ಉತ್ತರ ಕನ್ನಡ	16180	738
16.	ಗುಲ್ಬರ್ಗಾ	27221	207
17.	ಬೀದರ್	18477	27
18.	ರಾಯಚೂರು	22347	59
19.	ಬಳ್ಳಾರಿ	13946	338
	ಒಟ್ಟು	463998	7411

ಇ) ಕೇಂದ್ರದಿಂದ - ರೂ.33.50 ಕೋಟಿ

ಸಾಲದ ರೂಪದಲ್ಲಿ - ರೂ.33.50 ಕೋಟಿ

ಗ್ರಾಮೀಣ ಸೇವಾ ಸಹಕಾರ ಸಂಘಗಳಲ್ಲಿರುವ ನೌಕರರ ಬಗ್ಗೆ.

1600 - ಶ್ರೀ ಪಿ.ಸಿ. ಸಿದ್ದನ ಗೌಡರ್ (ಕಲಘಟಗಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮ ಸೇವಾ ಸಹಕಾರ ಸಂಘಗಳ ಕಾರ್ಯದರ್ಶಿ ಹಾಗೂ ಇತರೆ ಸಿಬ್ಬಂದಿ ವರ್ಗದವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗಿದೆಯೇ?

ಅ) ಇಲ್ಲದಿದ್ದಲ್ಲಿ ಕಳೆದ ವರ್ಷ ಈ ನೌಕರರ ಸಂಘದವರು ಮುಷ್ಕರವನ್ನು ಹೂಡಿದ ಸಮಯದಲ್ಲಿ ಸರ್ಕಾರವು ಇವರುಗಳನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ಬಗ್ಗೆ ಪರಿಶೀಲನೆ ಮಾಡುವುದಾಗಿ ಭರವಸೆ ಕೊಟ್ಟಿರುವುದು ನಿಜವೇ?

ಆ) ಹಾಗಿದ್ದಲ್ಲಿ ಆ ಭರವಸೆಯನ್ನು ಈಡೇರಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಇ) ಈ ಗ್ರಾಮ ಸೇವಾ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳಿಗೆ ಹೆಚ್ಚಿನ ವೇತನವನ್ನು ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು):

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆ ಬಗ್ಗೆ.

1602 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು? ಮತ್ತು ಇತರೆ ಕಾರ್ಡುಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ಮಾಹಿತಿ ನೀಡುವುದು?

ಆ) ರಾಜ್ಯದಲ್ಲಿರುವ ಹಸಿರು ಮತ್ತು ಇತರೆ ಕಾರ್ಡುಗಳನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು?

ಈ) ಗ್ರಾಮೀಣ ಪ್ರದೇಶದಲ್ಲಿ ಹಸಿರು ಕಾರ್ಡುಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ?

ಉ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 1) ಹಸಿರು ಕಾರ್ಡುಗಳು 31,14,332

2) ಇತರೆ ಕಾರ್ಡುಗಳು 47,24,277

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ತೋರಿಸಿದೆ).

ಆ) ಈ ಯೋಜನೆಯಡಿಯಲ್ಲಿ ನೀಡಲಾದ ಹಸಿರು ಕಾರ್ಡುದಾರರ ಪುನರ್ ಸಮೀಕ್ಷೆ ಜರುಗಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಷ್ಟರಲ್ಲಿಯೇ

ಈ) ಹೌದು

ಉ) ಸರ್ಕಾರವು ಸಂಬಂಧಪಟ್ಟವರಿಗೆಲ್ಲಾ ನಿರ್ದೇಶನ ನೀಡಿದೆ. ಈವರೆಗೆ ಇಂತಹ 37,370 ಕಾರ್ಡುಗಳನ್ನು ರದ್ದುಪಡಿಸಲಾಗಿದೆ.